33 ~~372~~ ನ 330 Answer date 21.03.2022

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎ ನಾರಾಯಣಸ್ವಾಮಿ ಇವರು ನಿಯಮ 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಗೆ ಸಂಬಂಧಿಸಿದಂತೆ, ನೂರಾರು ದಾವೆಗಳು ವಿವಿಧ ನ್ಯಾಯಾಲಯಗಳಲ್ಲಿ ನಡೆಸಲಾಗುತ್ತಿರುವುದು ಸರಿಯಷ್ಟೆ, ಈ ದಾವೆಗಳಲ್ಲಿ ಬಿ.ಬಿ.ಎಂ.ಪಿ ಹಿತಾಸಕ್ತಿಯನ್ನು ಕಾಪಾಡಲು ವಕೀಲರ ಅವಶ್ಯಕತೆ ಇಲ್ಲದಿದ್ದಲ್ಲಿ ಬಿ.ಬಿ.ಎಂ.ಪಿ.ಯ ಸಾವಿರಾರು ದಾವೆಗಳನ್ನು ಅನುವಾದಿಸಲು ಬಿ.ಬಿ.ಎಂ.ಪಿ ಪರ ಸಮರ್ಥವಾಗಿ ವಾದ ಮಂಡಿಸಲು ದಕ್ಷ, ಸಮರ್ಥವಾದ ವಕೀಲರ ಅವಶ್ಯಕತೆ ಇರುತ್ತದೆ. ಆದರೆ ಹಾಲಿ ಇರುವ ವಕೀಲರು ಬಿ.ಬಿ.ಎಂ.ಪಿ ಪರ ಸರಿಯಾದ ವಾದ ಮಂಡಿಸದೆ ಶೇ.90 ರಷ್ಟು ದಾವೆಗಳಲ್ಲಿ ಬಿಬಿಎಂಪಿ.ಗೆ ಹಿನ್ನೆಡೆಯುಂಟಾಗಿದ್ದು, ಇದರಿಂದಾಗಿ ಬಿ.ಬಿ.ಎಂ.ಪಿ.ಯ ಆಸ್ತಿಯು ಪಟ್ಟಬದ್ಧ ಹಿತಾಸಕ್ತಿಗಳ, ದಲ್ಲಾಳಿಗಳ ಹಾಗೂ ವಂಚನೆ ಮಾಡುವವರ ಪಾಲಾಗುತ್ತಿದೆ. ಇದನ್ನು ತಪ್ಪಿಸಲು ಬಿ.ಬಿ.ಎಂ.ಪಿ.ಗೆ ವಕೀಲರ ನೇಮಕಾತಿಯಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ, ಅರ್ಹತೆಯುಳ್ಳ ವಕೀಲರನ್ನು ನೇಮಿಸಿಕೊಳ್ಳಬೇಕಾಗಿರುವ ಮಾನದಂಡನೆಗಳ ಬಗ್ಗೆ ಚರ್ಚಿಸಲು ಅವಕಾಶ ಕೋರುತ್ತೇನೆ.

**ಉತ್ತರ:-**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಕೀಲರ ವೃಂದಕ್ಕೆ ವಕೀಲರನ್ನು ನೇಮಿಸುವಾಗ ಈವರೆಗೂ ಯಾವುದೇ ಅರ್ಹತಾ ಪರೀಕ್ಷೆ ಮತ್ತು ಮಾನದಂಡಗಳು ಹಾಗೂ ನಿಯಮಾವಳಿಗಳು ಇರುವುದಿಲ್ಲ. ಆದಾಗ್ಯೂ ಅರ್ಹತೆ ಮತ್ತು ವಿಷಯ ನೈಪುಣ್ಯತೆ ಹೊಂದಿದ ವಕೀಲರನ್ನು ನೇಮಿಸಿ ಕೊಳ್ಳಲಾಗುತ್ತಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನ್ಯಾಯಾಲಯ ಪ್ರಕರಣಗಳಲ್ಲಿ ಹಿನ್ನಡೆಯಾಗುತ್ತಿರುವುದಿಲ್ಲ. ಪಾಲಿಕೆಯು ವ್ಯಾಜ್ಯ ನಿರ್ವಹಣೆಯಲ್ಲಿ ಶೇ. 90 ಕ್ಕಿಂತ ಹೆಚ್ಚಿನ ಪ್ರಕರಣಗಳಲ್ಲಿ ಜಯಶಾಲಿಯಾಗುತ್ತಿದ್ದು, ವ್ಯತಿರಿಕ್ತ ಆದೇಶವಾದಲ್ಲಿ ಕೂಡಲೇ ಮೇಲ್ಮನವಿ ಸಲ್ಲಿಸಲಾಗುತ್ತಿದೆ.

ಪ್ರಸ್ತುತವಾಗಿ ಪಾಲಿಕೆಯ ವಕೀಲರ ವೃಂದಕ್ಕೆ ವಕೀಲರ ನೇಮಕಾತಿಯ ಬಗ್ಗೆ ನಿಯಮಾವಳಿ / ಮಾರ್ಗಸೂಚಿಯನ್ನು ರಚಿಸಲಾಗಿದ್ದು, ಅನುಷ್ಠಾನ ಅಂತಿಮ ಹಂತದಲ್ಲಿದ್ದು, ಶೀಘ್ರವಾಗಿ ಜಾರಿಗೆ ತರಲು ಕ್ರಮವಹಿಸಲಾಗುತ್ತಿದೆ.

---

**ಸಂಖ್ಯೆ: ನಅಇ 95 ಎಂಎನ್‌ಯು 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ